ಗುಲಾಬಿ ಗೊಂಚಲು

(ಕಿರುಗತೆಗಳು)



ಜಿ. ಎ. ಸನದಿ

ಶ್ರೀಕಾಂತ ರಮಾಸೇನಾಡಿ


...ಶನ, ರಮಾಸೇನಾಡಿ.

೧೯೫೫

ಸ್ನೇಹಕುಸುಮ: ೨

ಗುಲಾಬಿ ಗೊಂಚಲು

(ಶಿಶು ಗೀತಗಳು)



ಬಿ. ಎ. ಸನದಿ
ಶ್ರೀಕಾಂತ ಶಮನೇವಾಡಿ

ಸ್ನೇಹ ಪ್ರಕಾಶನ, ಶಮನೇವಾಡಿ
೧೯೫೫

ಪ್ರಕಾಶನ ಸಮಿತಿ:—

ಶ್ರೀ. ಫಣೀಂದ್ರ ಮಹಿಷವಾಡಿ
,, ಒ. ಗಿ. ಯಕ್ಷಿಟ್ಟಿ
,, ಶ್ರೀಕಾಂತ ಶಮನೇವಾಡಿ
,, ಬಾಳು ಬಿ. ಬಿವಾಪ್ರೆ
,, ಬಿ. ಎ. ಸನದಿ

ಮೊದಲ ಅಚ್ಚು:— ಆಗಸ್ಟ ೧೯೫೫

(ಹಕ್ಕುಗಳು ಲೇಖಕರ ವಶದಲ್ಲಿ)

★

ಬೆಲೆ: ಐದಾಣೆ

ಪುಸ್ತಕ ದೊರೆಯುವ ಸ್ಥಳ:—
ಜವಾಹಿರ್ ಬುಕ್ ಡಿಪೊ, ಶಮನೇವಾಡಿ.
ಸ್ನೇಹ ಪ್ರಕಾಶನ, ಶಮನೇವಾಡಿ.

★

ಮುದ್ರಕರು:—
ಶ್ರೀ. ಎ. ಪಿ ಚೌಗುಲೆ
ವೀರಭಾರತ ಮುದ್ರಣಾಲಯ, ಬೆಳಗಾಂವಿ.

ನಮ್ಮ ನುಡಿ

ಮುದ್ದು ಮಕ್ಕಳೇ,

ಈಗಾಗಲೇ ನೀವು ಸ್ನೇಹ–ಪ್ರಕಾಶನದ ಮೊದಲ ಹೂವಾದ 'ಐದಳ ಮಲ್ಲಿಗೆ'ಯ ಪರಿಮಳವನ್ನು ಸವಿದಿದ್ದೀರಲ್ಲವೇ? ಅದರ ಹಿಂದಿನಿಂದಲೇ ಈ ಎರಡನೆಯ ಹೂವನ್ನೂ ಅರ್ಪಿಸಲು ನಮಗೆ ತುಂಬಾ ಸಂತೋಷವಾಗುತ್ತದೆ.

ಇದೋ, ಎತ್ತಿಕೊಳ್ಳಿ ಈ ಗುಲಾಬಿ ಗೊಂಚಲು!

ಇದು ನಿಮಗಾಗಿಯೇ ಅರಳಿ ಬಂದ ಹೂ! ಇಂದಿನ ಸ್ವಾತಂತ್ರ್ಯೋತ್ಸವದ ಸವಿಗಾಳಿಯಲ್ಲಿ ಬೆರೆತು ಬರುವ ಇದರ ಸುಗಂಧ ನಿಮಗೆ ಪ್ರಿಯವಾದೀತೆಂಬ ಭರವಸೆ ನಮಗಿದೆ.

ಇದರಲ್ಲಿ ಬೇರೆ ಬೇರೆ ವಯಸ್ಸಿನ ಮಕ್ಕಳಿಗೂ ತಿಳಿಯುವಂತೆ ವಿವಿಧ ಮಟ್ಟದ ಕವಿತೆಗಳನ್ನು ಆರಿಸಿ ಕೊಡುವ ಪ್ರಯತ್ನ ಮಾಡಿದ್ದೇವೆ. ಅಲ್ಲಲ್ಲಿಯ ನಮ್ಮ ಶಿಕ್ಷಕ ಬಂಧುಗಳೂ ನಿಮ್ಮಂಥ ತಿಳಿಮನದ ಎಳೆ ಮಕ್ಕಳಿಗೆ ಇಲ್ಲಿಯ ಕೆಲವು ಹಾಡುಗಳನ್ನು ತಿಳಿಸಿ ಹೇಳುವ ಶ್ರಮವಹಿಸಿದರೆ ನಮ್ಮ ಪುಟ್ಟ ಪ್ರಯತ್ನ ಸಫಲವಾಗಬಹುದೆಂದು ನಾವು ಆಶಿಸುತ್ತೇವೆ.

ಈ ಹೂವನ್ನರಿಸುವಲ್ಲಿ ಬಲು ಪ್ರೀತಿಯಿಂದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ ಕನ್ನಡದ ಪ್ರಸಿದ್ಧ ಕವಿಗಳೂ, ಆತ್ಮೀಯ ಹಿರಿಯರೂ ಆದ ಡಾ. ಡಿ ಎಸ್. ಕರ್ಕಿ, ಎಂ. ಎ; ಪಿ. ಎಚ್. ಡಿ. ಅವರಿಗೆ ನಮ್ಮ ಅನಂತ ಕೃತಜ್ಞತೆಗಳು ಸಲ್ಲಬೇಕು. ಈ ಹೂವು ಇಷ್ಟು ಬೇಗ ಅರಳಿ ಬರುವಂತೆ ಪ್ರೇರೇಪಿಸಿದ ಎಲ್ಲ ಸ್ನೇಹಿತರಿಗೂ ನಾವು ಋಣಿಯಾಗಿದ್ದೇವೆ. ಅಚ್ಚಿನ ಕೆಲಸದಲ್ಲಿ ಬಹುವಾಗಿ ಶ್ರಮಪಟ್ಟು ಸಹಕರಿಸಿದ ಗೆಳೆಯ ಎಸ್. ಪಿ. ಹಿರೇಮಠರ ಉಪಕಾರವನ್ನು ನಾವು ಮರೆಯುವುದುಂಟೆ?

ಮಕ್ಕಳೇ, ಈ ಹೂವು ನಿಮ್ಮದು. ನೀವೆಲ್ಲ ನಾಡ ನುಡಿಯ ಮಕರಂದ ಹೀರುವ ಮರಿದುಂಬಿಗಳು! ಅಂದ ಬಳಿಕ ನೀವೆಲ್ಲಾ ಈ ಹೂವಿನ ಸವಿ-ಸೊಬಗನ್ನು ಹೀರಿ ಆನಂದಪಡುತ್ತೀರೆನ್ನುವಲ್ಲಿ ಸಂದೇಹವಾದರೂ ಏಕೆ? ನಿಮ್ಮ ಸಂತೋಷವೇ ನಮ್ಮ ಸಮಾಧಾನ!

ನಿಮ್ಮ ಹಾಗೆಯೇ ನಮ್ಮ-ನಿಮ್ಮ ಹಿರಿಯರೂ ಈ ಪುಟ್ಟ ಕೃತಿಯನ್ನು ಪ್ರೀತಿಯಿಂದ ಬರಮಾಡಿಕೊಳ್ಳುವರೆಂದು ಆಶಿಸೋಣವೆ?

'ಆಶಾದೀಪ'
ರಮನೇವಾಡಿ
೧೫, ಆಗಸ್ಟ ೫೫

ಎಂದು ನಿಮ್ಮ,
ಬಿ. ಎ. ಸನದಿ
ಶ್ರೀಕಾಂತ ಕಮನೇವಾಡಿ

ಮುನ್ನುಡಿ

ಕನ್ನಡ ನಾಡಿನ ಮಕ್ಕಳು ಹಾಡುವುದಕ್ಕೆ ಗೀತಗಳು ಎಷ್ಟು ಹೆಚ್ಚು ರಚಿತವಾದರೆ ಅಷ್ಟು ಹಿತ. ಶಿಶುಸಾಹಿತ್ಯ ನಮ್ಮಲ್ಲಿ ಇನ್ನೂ ಬೆಳೆಯಬೇಕಾಗಿದೆ. ಹಿರಿಯ ಕವಿಗಳಲ್ಲಿ ಕೆಲವರು ಹಿರಿಯರಿಗಾಗಿ ಮಾತ್ರವಲ್ಲ, ಎಳೆಯರಿಗಾಗಿಯೂ ಗೀತಗಳನ್ನು ಈಗಾಗಲೇ ಬರೆದಿದ್ದಾರೆ. ಈ ದಿಶೆಯಲ್ಲಿ ಹಿರಿಯರ ಹೆಜ್ಜೆಯನ್ನು ತರುಣರೂ ತುಳಿಯಲು ಮುಂದೆ ಬರುತ್ತಿರುವುದು ತುಂಬಾ ಸಂತೋಷದ ಸಂಗತಿ. ಬೆಳಗಾಂವಿ ಜಿಲ್ಲೆಯ ಶಮನೇವಾಡಿ ಎಂಬ ಊರಲ್ಲಿ ಸಾಹಿತ್ಯ ಸಂಸ್ಕೃತಿ ಕಾರ್ಯಕಲಾಪಗಳನ್ನು ಪ್ರಾರಂಭಿಸಿದ ತರುಣ ಕವಿಗಳಲ್ಲಿ ಇಬ್ಬರು ತಮ್ಮ ನೆಚ್ಚಿನ ನಾಡಿನ ಎಳೆಯರು ಹಾಡಲಿ ಎಂದು ಈ ಹಾಡುಗಳನ್ನು ಬರೆದು 'ಗುಲಾಬಿ ಗೊಂಚಲು' ಎಂದು ಹೆಸರಿಟ್ಟು ಅದಕ್ಕೆ ಮುನ್ನುಡಿ ಬರೆಯಲು ನನ್ನನ್ನು ಕೇಳಿದ್ದಾರೆ. ಅವರ ಈ ಅಂದವಾದ ಹಾಡುಗಳಿಗೆ ಒಲವಿನ ಮುನ್ನುಡಿಯನ್ನು ನುಡಿಯುದೆಂದರೆ ನನಗೆ ತುಂಬಾ ಮೆಚ್ಚಿಕೆ. ಮೊದಲನೆಯದಾಗಿ ಮಕ್ಕಳ ಹಾಡುಗಳೆಂದರೆ ನನಗೆ ಅಕ್ಕರೆ. ಎರಡನೆಯದಾಗಿ ಈ ಗೀತಗಳನ್ನು ರಚಿಸಿದ ಇಬ್ಬರು ತರುಣ ಕವಿಗಳಲ್ಲಿ ಒಬ್ಬರು ಕೆಲವು ವರುಷಗಳ ಹಿಂದೆ ನನ್ನ ವಿದ್ಯಾರ್ಥಿಯಾಗಿದ್ದ ಸಂಗತಿಯು ನನ್ನನ್ನು ಈ ಮುನ್ನುಡಿಯನ್ನು ಬರೆಯುವಂತೆ ಪ್ರೇರಿಸಿದೆ.

ಶ್ರೀ. ಬಿ. ಎ. ಸನದಿ ಹಾಗೂ ಶ್ರೀಕಾಂತ ಶಮನೇವಾಡಿ ಅವರು ತಮ್ಮ ಶಿಶುಗೀತಗಳಿಗೆ ಹೆಸರಿಟ್ಟಮೇರೆಗೆ ಈ ಗೀತಸಂಗ್ರಹವು ನಿಜವಾಗಿಯೂ ಒಂದು ಗುಲಾಬಿ ಗೊಂಚಲು. ಈ ಸಂಗ್ರಹದಲ್ಲಿ ಸೇರಿದ ಮೊದಲನೆಯ ಹಾಡು ಗುಲಾಬಿ ಗೊಂಚಲಿನ ಪರಿಚಯವನ್ನು ಸೊಗಸಾಗಿ ಮಾಡಿಕೊಡುತ್ತದೆ. ಗುಲಾಬಿ ಗೊಂಚಲು ಕರೆದರೆ ಯಾರು ತಾನೇ ಓಗೊಡರು? ಹೂಗೊಂಚಲಿಗೆ ತುಂಬಿಗಳು ಬರುವುದು ಸಹಜ. ಗುಲಾಬಿಯ ಪರಿಮಳದಂತಿರುವ ಭಾವವನ್ನು ಒಳಗೊಂಡಿರುವ ಈ ಗೀತಸಂಗ್ರಹದ ಗೀತಗಳನ್ನು ಎಳೆಯರು ಬರಮಾಡಿಕೊಳ್ಳಬಹುದೆಂದು ನಾನು ನಂಬಿದ್ದೇನೆ

ಗಿಳಿಕೆಯ ಕೊಡುವೆನು ಸುಮ್ಮನೆ ಮಲಗು
ನನ್ನೆದೆ ಬನದಲ್ಲಿ
ಹೂವಿನ ಮೊಗ್ಗೆಯು ಹುದಗಿರುವಂತೆ
ಹಸಿರೆಲೆ ಜಳ್ಳಿಯಲ್ಲಿ

ಇವೇ ಮೊದಲಾದ ಪದ್ಯಗಳಲ್ಲಿ ಉಪಮೆಗಳು ಸುಂದರವಾಗಿ ಹೊಂದಿಕೊಂಡಿವೆ.

ಶ್ರೀ. ಬಿ. ಎ. ಸನದಿ ಅವರು ಹಾಗೂ ಶ್ರೀಕಾಂತ ಶಮನೇವಾಡಿ ಅವರು ಕೈಗಿತ್ತ ಈ ಹೂಗೊಂಚಲು ತನ್ನ ಚೆಲುವಿನಿಂದ ಹಾಗು ಕಂಪಿನಿಂದ ಬಾಲಕರ ಮನಸ್ಸನ್ನು ಸೂರೆಗೊಳ್ಳುವಂತಾಗಲಿ ಎಂದೂ, ಇದೇ ಮೇರೆಗೆ ಹೆಚ್ಚು ಹೆಚ್ಚಾಗಿ ಶಿಶುಗೀತಗಳನ್ನು ಅವರು ಬರೆದು ಧನ್ಯರಾಗಲಿ ಎಂದೂ ಹಾರೈಸುತ್ತೇನೆ.

ಹುಬ್ಬಳ್ಳಿ.
ತಾ. ೮-೮-೧೯೫೫

ಡಿ. ಎಸ್. ಕರ್ಕಿ.

ಮುನ್ನುಡಿ

ಕನ್ನಡ ನಾಡಿನ ಮಕ್ಕಳು ಹಾಡುವುದಕ್ಕೆ ಗೀತಗಳು ಎಷ್ಟು ಹೆಚ್ಚು ರಚಿತವಾದರೆ ಅಷ್ಟು ಹಿತ. ಶಿಶುಸಾಹಿತ್ಯ ನಮ್ಮಲ್ಲಿ ಇನ್ನೂ ಬೆಳೆಯಬೇಕಾಗಿದೆ. ಹಿರಿಯ ಕವಿಗಳಲ್ಲಿ ಕೆಲವರು ಹಿರಿಯರಿಗಾಗಿ ಮಾತ್ರವಲ್ಲ, ಎಳೆಯರಿಗಾಗಿಯೂ ಗೀತಗಳನ್ನು ಈಗಾಗಲೇ ಬರೆದಿದ್ದಾರೆ. ಈ ದಿಶೆಯಲ್ಲಿ ಹಿರಿಯರ ಹೆಜ್ಜೆಯನ್ನು ತರುಣರೂ ತುಳಿಯಲು ಮುಂದೆ ಬರುತ್ತಿರುವುದು ತುಂಬಾ ಸಂತೋಷದ ಸಂಗತಿ. ಬೆಳಗಾಂವಿ ಜಿಲ್ಲೆಯ ಶಮನೇವಾಡಿ ಎಂಬ ಊರಲ್ಲಿ ಸಾಹಿತ್ಯ ಸಂಸ್ಕೃತಿ ಕಾರ್ಯಕಲಾಪಗಳನ್ನು ಪ್ರಾರಂಭಿಸಿದ ತರುಣ ಕವಿಗಳಲ್ಲಿ ಇಬ್ಬರು ತಮ್ಮ ನೆಚ್ಚಿನ ನಾಡಿನ ಎಳೆಯರು ಹಾಡಲಿ ಎಂದು ಈ ಹಾಡುಗಳನ್ನು ಬರೆದು 'ಗುಲಾಬಿ ಗೊಂಚಲು' ಎಂದು ಹೆಸರಿಟ್ಟು ಅದಕ್ಕೆ ಮುನ್ನುಡಿ ಬರೆಯಲು ನನ್ನನ್ನು ಕೇಳಿದ್ದಾರೆ. ಅವರ ಈ ಅಂದವಾದ ಹಾಡುಗಳಿಗೆ ಒಲವಿನ ಮುನ್ನುಡಿಯನ್ನು ನುಡಿಯುದೆಂದರೆ ನನಗೆ ತುಂಬಾ ಮೆಚ್ಚಿಕೆ. ಮೊದಲನೆಯದಾಗಿ ಮಕ್ಕಳ ಹಾಡುಗಳೆಂದರೆ ನನಗೆ ಅಕ್ಕರೆ. ಎರಡನೆಯದಾಗಿ ಈ ಗೀತಗಳನ್ನು ರಚಿಸಿದ ಇಬ್ಬರು ತರುಣ ಕವಿಗಳಲ್ಲಿ ಒಬ್ಬರು ಕೆಲವು ವರುಷಗಳ ಹಿಂದೆ ನನ್ನ ವಿದ್ಯಾರ್ಥಿಯಾಗಿದ್ದ ಸಂಗತಿಯು ನನ್ನನ್ನು ಈ ಮುನ್ನುಡಿಯನ್ನು ಬರೆಯುವಂತೆ ಪ್ರೇರಿಸಿದೆ.

ಶ್ರೀ. ಬಿ. ಎ. ಸನದಿ ಹಾಗೂ ಶ್ರೀಕಾಂತ ಶಮನೇವಾಡಿ ಅವರು ತಮ್ಮ ಶಿಶುಗೀತಗಳಿಗೆ ಹೆಸರಿಟ್ಟವರೆಗೆ ಈ ಗೀತಸಂಗ್ರಹವು ನಿಜವಾಗಿಯೂ ಒಂದು ಗುಲಾಬಿ ಗೊಂಚಲು. ಈ ಸಂಗ್ರಹದಲ್ಲಿ ಸೇರಿದ ಮೊದಲನೆಯ ಹಾಡು ಗುಲಾಬಿ ಗೊಂಚಲಿನ ಪರಿಚಯವನ್ನು ಸೊಗಸಾಗಿ ಮಾಡಿಕೊಡುತ್ತದೆ. ಗುಲಾಬಿ ಗೊಂಚಲು ಕರೆದರೆ ಯಾರು ತಾನೇ ಓಗೊಡರು? ಹೂಗೊಂಚಲಿಗೆ ತುಂಬಿಗಳು ಬರುವುದು ಸಹಜ. ಗುಲಾಬಿಯ ಪರಿಮಳದಂತಿರುವ ಭಾವವನ್ನು ಒಳಗೊಂಡಿರುವ ಈ ಗೀತಸಂಗ್ರಹದ ಗೀತಗಳನ್ನು ಎಳೆಯರು ಬರಮಾಡಿಕೊಳ್ಳಬಹುದೆಂದು ನಾನು ನಂಬಿದ್ದೇನೆ

ಗಿಲಿಕೆಯ ಕೊಡುವೆನು ಸುಮ್ಮನೆ ಮಲಗು
ನನ್ನೆದೆ ಬನದಲ್ಲಿ
ಹೂವಿನ ಮೊಗ್ಗೆಯು ಹುದಗಿರುವಂತೆ
ಹಸಿರೆಲೆ ಬಳ್ಳಿಯಲ್ಲಿ

ಇವೇ ಮೊದಲಾದ ಪದ್ಯಗಳಲ್ಲಿ ಉಪಮೆಗಳು ಸುಂದರವಾಗಿ ಹೊಂದಿಕೊಂಡಿವೆ.

ಶ್ರೀ. ಬಿ. ಎ. ಸನದಿ ಅವರು ಹಾಗೂ ಶ್ರೀಕಾಂತ ಶಮನೇವಾಡಿ ಅವರು ಕೈಗಿತ್ತ ಈ ಹೂಗೊಂಚಲು ತನ್ನ ಚೆಲುವಿನಿಂದ ಹಾಗು ಕಂಪಿನಿಂದ ಬಾಲಕರ ಮನಸ್ಸನ್ನು ಸೂರೆಗೊಳ್ಳುವಂತಾಗಲಿ ಎಂದೂ, ಇದೇ ಮೇರೆಗೆ ಹೆಚ್ಚು ಹೆಚ್ಚಾಗಿ ಶಿಶುಗೀತಗಳನ್ನು ಅವರು ಬರೆದು ಧನ್ಯರಾಗಲಿ ಎಂದೂ ಹಾರೈಸುತ್ತೇನೆ.

ಹುಬ್ಬಳ್ಳಿ.
ತಾ. ೮-೮-೧೯೫೫

ಡಿ. ಎಸ್. ಕರ್ಕಿ.

ಸಮರ್ಪಣೆ

ಕಮನೇವಾಡಿಯಲ್ಲಿ
ಕಾವ್ಯಲತೆಯ ಬೀಜ ಬಿತ್ತಿ,
ಅದು ಬೆಳೆದು ಹೂ ಬಿಡುವ ಮುನ್ನವೇ
ಕಣ್ಮರೆಯಾದ

ದಿ. ಡಾ| ' ದೇವೇಂದ್ರತನಯ '

ಅವರ

ಪವಿತ್ರ ಸ್ಮರಣೆಗೆ.

" ಎಳೆ ಮಕ್ಕಳ ಮನಸೆಂದರೆ
ಮಲ್ಲಿಗೆ ಸಂಪಿಗೆ ಮಕರಂದ;
ಹೃದಯವೆ ಹಿಡಿಸದ ಆನಂದ !
ಮಧು-ಮಾಸದ ಮಧು ಮೈದುಂಬಿ
ಹೂ-ಹೂವಿಗೆ ಹಾರುವ ತುಂಬಿ ! "

— ಭುಜೇಂದ್ರ ಮಹಿಷವಾಡಿ.

ಬಿ. ಎ. ಸನದಿ



ಪರಿವಿಡಿ:

ಗುಲಾಬಿ ಗೊಂಚಲು

೧

ಗುಂಯ್ ಗುಂಯ್ ಗುಂಜಾರವವನು ಮಾಡುತ
ಗುಂಗಿಯ ಹುಳಗಳು ಬಂದವು ಹಾಡುತ
ಝುಂ ಝುಂ ನಸುಕಿನಲಿ
ಹಾರುತ
ನಮ್ಮ ತೋಟದಲ್ಲಿ !

೨

ಲಾಲಿಸುತಾ ಸವಿ ಹಾಡಿನ ಸರವನು
ತೆರೆದವು ಹೂಗಳು ದಳದುಟಿಗಳನು
ಅಳಿಗಳ ಕರೆಯಲಿಕೆ,
ಅವುಗಳ
ಮುತ್ತನು ಸವಿಯಲಿಕೆ !

೩

ಬಿಂಕದೊಳೆಲ್ಲಾ ಹೂಗಳ ಹಿಂದಕೆ
ಸರಿಸುತ ಬಂದಿತು ಗುಲಾಬಿ ಮುಂದಕೆ
ಮಿಂಚು-ಗೊಂಚಲಾಗಿ
ಚೆಲುವಿನ
ರೂಪರಾಶಿಯಾಗಿ !

೪

ಗೊಂಡೆಯೆ ಏನೋ ಹಸಿರಿನ ಹೆರಳಿಗೆ
ವಜ್ರದ ಉಂಗುರ ಸುಂದರ ಬೆರಳಿಗೆ
ಎನುವ ತೆರದೊಳಿತ್ತು;
ಗುಲಾಬಿ
ಕುಲು ಕುಲು ನಗುತ್ತಿತ್ತು !

೫

ಚೆಲುವಿನ ಚನ್ನೆಯು ದಳದುಟಿ ಮುದ್ದಿಸಿ
ಸವಿ ಮಕರಂದದ ಭೋಜನ ಸೇವಿಸಿ
ಹಾರಿತು ಅಳಿವಿಂಡು !
ನಕ್ಕಿತು
ಜನವೆ ಅದನು ಕಂಡು !

೬

ಲುಕು ಲುಕು ಹೊಳೆಯುವ ಗುಲಾಬಿ ಗೊಂಚಲು
ನಂತರ ಕರೆಯಿತು ನನ್ನನು ಬಳಿಯೊಳು
ನಡೆದುದ ಹೇಳಲಿಕೆ !
ಅದರದೆ
ಹಾಡನು ಹಾಡಲಿಕೆ !

ತಾಯಿ

೧

ತಾಯಿಯುಳ್ಳ ಬಾಲಕರಿಗೆ
ಬಾಳು ಸವಿಯ ಸಕ್ಕರೆ !
ಅವಳ ಮಮತೆಯಂತೆ ಇರದು
ಜಗದಿ ಯಾರ ಅಕ್ಕರೆ !

೨

ಕಡಲಿನಾಳದಂತೆ ಅವಳ
ಮನದನಂತ ಕರುಣೆಯು;
ಮುಗಿಲಿನಗಲ ಶಾಂತಿ-ಸಹನೆ
ಬೆರೆತ ಪ್ರೇಮಸರಣಿಯು !

೩

ಕರುಳ ಕುಡಿಯ ಮಿಡಿಯೆ ಮಗುವು
ಎಂಬುದವಳ ಭಾವನೆ.
ಅದನು ಯಾರು ಚಿವುಟಬಹುದೆ
ಇರಲು ತಾಯ ರಕ್ಷಣೆ ?

೪

ಆಡಿಸುವಳು ಹಾಡಿಸುವಳು
ಮೋದದಿಂದ ದಿನ ದಿನ;
ನೂರು ನೋವುಗಳನು ಮರೆಸಿ
ತುಂಬಿಸುವಳು ತನು-ಮನ !

೫

ತಾಯಿಯೊಲವು ಬತ್ತದಂಥ
ತಿಳಿಯ ನೀರಿನೊರತೆಯು;
ದಿನವು ಅದನೆ ಉಂಡು ಬೆಳೆವ
ಮಗುವಿಗೇನು ಕೊರತೆಯು ?

೬

ತನ್ನ ಮಗುವು ಬೆಳೆದು ಬೆಳಕ
ಕಾಣಲೆಂಬ ಬಯಕೆಯು
ಅವಳಿಗಿರಲು, ಅದನೆ ನಂಬಿ
ನಡೆವಳವಳು ನಿತ್ಯವು !

೭

ದಾರಿಯಲ್ಲಿ ಯಾವ ಎಡರು
ಬಂದರೂನು ಮಗುವನು
ನಗುವಿನಲ್ಲೆ ಬೆಳೆಸಲವಳು
ಬೆಳಸುವವಳು ಬಾಳನು !

೮

ಅಂತೆ ತಾಯಿಯುಳ್ಳವರಿಗೆ
ಬಾಳು-ಸವಿಯು ಸಕ್ಕರೆ !
ಅವಳ ಮಮತೆ ಮೀರಿ ಇರದು
ಜಗದಿ ಯಾರ ಅಕ್ಕರೆ !!

ಅಕ್ಕ-ತಂಗಿ

ಅನುಮಾನವೇ ಇನ್ನು
ಬರಲೆನ್ನ ಬಳಿಗೆ ?
ಅಂಜದೆಯೆ ಓ ಎನ್ನು
ನನ್ನೆದೆಯು ಕರೆಗೆ !

★

ಹರಿಜನರವಳು ನೀನು
ಸಾನರಿಯೆನೇನು ?
ಆದರೂ ಅನುನಯದಿ
ಕರೆಯುತ್ತಲಿಹೆನು;

★

ಧೋ ಎಂದು ಸುರಿಯುತಿರೆ
ಜಡಿಮಳೆಯು ಧಾರೆ,
ಅಂಗಳದಿ ನಿಲ್ಲುವುದೆ ?—
ಬಾ ಒಳಗೆ ಬಾರೆ !

★

ಅಯ್ಯೋ ! ಹರಿದಿದೆ ಸೀರೆ
ಚಳಿಯೆನಿಸದೇನೆ ?
ತಲೆ ತೊಯ್ಯುತಿದೆ, ನೆಗಡಿ
ನಿನಗಾಗದೇನೆ ?

ನಮ್ಮ ಮನೆ ಚಪ್ಪರವು
ತುಸು ಸೋರುತಿಹುದು !
ಆದರೂ ಕೆಲ ಕಾಲ
ನೀ ನಿಲ್ಲಬಹುದು !

★

ನಾ ಅಕ್ಕ ನೀ ತಂಗಿ
ಆಗೋಣ ಇಂದು
ಅದಕಾಗಿ ಕರೆವೆನಿದೊ
' ಬಾ ಒಳಗೆ ' ಎಂದು !

★

ಅನುಮಾನವೇ ಇನ್ನು
ಬರಲೆನ್ನ ಬಳಿಗೆ ?
ಅಂಜದೆಯೆ ಓ ಎಂದು
ಬಾ ಒಳಗೆ ಬಾರೆ !

ನನ್ನ ಆಸ್ತಿ !

೧

ಹುಡುಗೋರ್ ಸಂಗ್ತೀ ಆಡೋದ್ ನಂಗೆ
ಜೀವಕ್ಕಿಂತಾ ಜಾಸ್ತಿ !
ಹಿರಿಯೋರ್ ಕಿರಿಯೋರ್ ಪಿರೀತಿಯೊಂದೆ
ನನಗಾಗ್ಬೈತೀ ಆಸ್ತಿ !

೨

ದೊಡ್ಡೋನಾದ್ರೂ ಸಣ್ಣೋರ್ಸಂಗೆ
ಇರಬೇಕಂತೇನ್ ನಾನು,
ಕಪಟಾ-ಗಿಪಟಾ ಕಾಣದ ಮಕ್ಕಳ್
ಮಾತೆ ಸವಿ ಸವಿ ಜೇನು !

೩

ಕನಸು-ಮನಸೀನ್ಯಾಗ ಮಕ್ಳು
ಬರ್ತಾರ್ ನನ್ನೆ ಮನಿಗೆ;
ನಾನೂ ಅವರೊಳಗೆ ಒಬ್ನಾಗಿ
ಹಾಕ್ತೇನ್ ದಿನವೂ ದಂಗೆ !

೪

ಭಾರತಿ ಬರ್ತಾಳ್ ಹಿಂದಿದ್ ಮತ್ತು
ಬೇಬೀ ಶೋಭಾ ಗೀತಾ,
ಆನಂದ್ ಬಂದಾಗ್ ಸುನಂದಾ ಬಂದ್ರು
ನಡೀತೈತಾಟದ ಕತಾರ್ !

೫

ಎಲ್ಲಾರ್ ಕೂಡೀ, ಆಡೀ, ಹಾಡೀ
ನಗ್ ನಗ್‌ತಿರ್ತೀವಿ ನಾವು !
ಮಕ್ಕಳ್ ಹಾಂಗು ಇರ್ಲಾಕ ಬಾದ್ರು
ಸವಿ ಹತ್ತೈತೀ ಬೇವು !

೬

ಹುಡುಗೋರ್ ಸಂಗ್ತೀ ಆಡೋದ್ ನಂಗು
ಜೀವಕ್ಕಿಂತಾ ಜಾಸ್ತಿ !
ಹಿರಿಯೋರ್ ಕಿರಿಯೋರ್ ಪಿರೀತಿಯೊಂದು
ನಗಗಾಗೈತೀ ಆಸ್ತಿ !!

ಬಾ ಸುನಂದಾ

೧

ಬಾ ಬಾರ ಕಂದಾ
ಬಾರೊ ಸುನಂದಾ
ಬ್ಯಾಸರ ಬಂದೈತಿ ಆಡೋಣು;
ಅಚಿ ಕೈ ತಾರ
ಇಚಿ ಕೈ ತಾರೊ
ಮುಟಿಗ್ಯಾಗೇನೈತಿ ನೋಡೋಣು ?—

೨

ಅರೆರೆ ! ಬಿಟ್ಟೇ ?
ಬಿತ್ತೊಲ ರೊಟ್ಟಿ !
ಎತಕೋ ಮೊದಲದ ತಿನ್ನೋಣು;
ಆ ಮ್ಯಾಲ ಆಟ
ಆಡೋಣ ಈಟ,
ಕಡಿಕೊಂದ್ ಹಾಡರೆ ಅನ್ನೋಣು !

೩

ಘಾತಕ ಗೆಜ್ಜಿ,
ಈಟೀಟ ಹೆಜ್ಜೀ
ಇಡು ತ್ರೋಡುತ ಬಾ ಕುಣಿಲಾಕ;
ಘಾತ್ಕ್ಯಾರು ಬ್ಯಾಡ
ಒಬ್ಬಾಕಿ ಓಡ
ಲಗು-ಬಿಗಿ ಬಾ ಮರಿ ಸನಿಯಾಕ !

೪

ಬಾವ್ಯಾಗ ನೀರ
ತುಂಬೈತಿ ಪೂರ
ಗಿಂಡೀನ ತಾರಽ ತರಲಾಕ;
ಹೂವಿನ ಬಳ್ಳೀ
ಬೆಳದೈತಿಲ್ಲೀ
ನೀ ಬಾರ ನೀರಽ ಸುರಿಲಾಕ !

೫

ಗಳ ಗಳ ಗಂಟೆ
ಬಾರಿಸಿ ಕಂಟೀ
ಮರಿಯಾಗ ನಿಂತಕೋ ಬನದಾಗ;
ನಾ ಹಿಂದಿಂದ
ತುಡುಗೀಲೆ ಬಂದ
ಹಿಡಿತೇನ್ ಬಂದಽ ಗಳಿಗ್ಯಾಗ !

೬

ಚುರುಮುರಿ ತಂದ
ಕುರು ಕುರು ತಿಂದ
ಕುರಿಮರಿಯಾಟಾ ಆಡೋಣು !
ಸಾಕಾದ ಮ್ಯಾಗ
ತೊಟ್ಟೀಲ ತೂಗ
ಗೊಂಬೀ ಮಲಗಲು ಹಾಡೋಣು

೭

ಬಂದ್ಯಾ ಕಂದಾ ?
ಬಾರ ಸುನಂದಾ
ಓಡೋಡಿ ಬಾರಽ ನನತನಕ
ಏನಾರೆ ಛಂದಾ
ನಗತೀ ಕಂದಾ,
ನಗು ನಗುತಿರು ನೀ ಕಡಿತನಕ !

ನರ್ತನ ಲೀಲೆ

೧

ಗೆಜ್ಜೆಯ ಕಟ್ಟಿದ ಹೆಜ್ಜೆಗಳಿಡುತಲಿ
ಘಿಲ್ ಘಿಲ್ ಸಪ್ಪಳ ಮಾಡುತಲಿ,
ಸಣ್ಣನೆ ದನಿಯಲಿ ಹಾಡುತ ಕುಣಿಯುವ
ಬಾಲೆಯ ನರ್ತನ ನೋಡಿಲ್ಲಿ:

೨

ವಾದ್ಯದ ಮಿಡಿತಕೆ ಹಾಡಿನ ನುಡಿತಕೆ
ಸರಿ ಸರಿ ಅಡಿಗಳ ನಿಡುತಿರಲು
ಚಿಮ್ಮುವ ನಾದವೋ, ಹೊಮ್ಮುವ ಮೋದವೊ
ಮನಮೋಹಕವಾಗಿಹುದು ಬಲು !

೩

ಮೈ–ಕೈ ಮಣಿಸುತ, ಕಣ್‌ಗಳ ಕುಣಿಸುತ
ತೂಗುತ ಬಾಗುತ ನಗುನಗುತ
ಕುಣಿಯುವ ಕನ್ಯೆಯ ಬೆನ್ನಿನ ಮೇಲಿನ
ಜಡೆ ಬಳಕುತ್ತಿದೆ ಅತ್ತಿತ್ತ !

೭

ಥಕ ಥೈ ಥಕ ಥೈ ತಾಳಕೆ ಸೈ ಸೈ
ಗೆಜ್ಜೆಯು ಸಪ್ಪಳದೀ ಹೊನಲು
ಹರಿಯುತಲಿದೆ, ಈ ಜನಗಳ ಮನಗಳ
ತಣಿಸಿದೆ ಹಾಡಿನ ಸವಿಗೊರಲು !

೮

ಬಾಲೆಯು ನರ್ತನಲೀಲೆಯ ಸವಿಯುತ
ಚಿಂತೆಯು ಮರೆಯುವ ಜಾ ಮಿತ್ರ
ದಿನಗಳು ಕಳೆದರು ಮರೆಯದ ತೆರದೊಳು
ಮನದಣಿ ನೋಡುವ ಈ ಚಿತ್ರ !

ಹಬ್ಬ

ಹಬ್ಬವು ಬಂತು
ಹರುಷವ ತಂತು
ಬಾರೇ ಶಾಂತು
ನಲಿಯೋಣ

●

ಪಾಯಸ ಸುರಿದು
ಹಾಲನು ಕುಡಿದು
ದಿನವಿಡಿ ಕುಣಿದು
ತಣಿಯೋಣ !

ಥಕ ಥಕ ಥೈಯಾ
ದುಡ್ಡೂ ಪೈಯಾ
ತರಲಿಕೆ ತ್ರೈಯಾ-
ರಾಗೋಣ !

●

ಧುಡುಂ ಧುಡಕಿ
ಪಾನಸೇರ್ ಅಡಿಕಿ
ತುಂಬಿದ ಪುಡಿಕಿ
ತರಿಸೋಣ !

●

ಬಗಾಟಿ ಬಗರಿ
ಬಣ್ಣದ ಚವರಿ
ವೈ-ವೈ ಸವರಿ
ಕುಣಿಯೋಣ !

●

ಎಲ್ಲರು ಕೂಡಿ
ಹಾಡುತ ಆಡಿ
ದುಕ್ಕವ ದೂಡಿ
ಮರೆಸೋಣ !

●

ನಮ್ಮನು ಬಲ್ಲ
ಜನರಿಗೆ ಎಲ್ಲ
ಎಳ್ಳೂ-ಬೆಲ್ಲ
ತಿನಿಸೋಣ !

ಕನ್ನಡ ಹಾಡು

ಅಲ್ಲಿಯು ಇಲ್ಲಿಯು ಹಾಡನು ಕೇಳಿ
ಬೇಸರ ಬಂದಿದೆ ನನಗೆ;
ತಾಯ್ಮನೆ-ಮಾತೇ ಕನ್ನಡವಾಗಿರೆ
ಅದರದೆ ಆಸರ ಕೊನೆಗೆ !

೨

ಹಾಲಿನ ಕಡಲಲಿ ಹಂಸೆಯು ಜೋಡಿ
ಈಸುತ್ತಿರುವುದು ಚಂದ;
ನಾನೀ ಕನ್ನಡ ಭಾಷೆಯು ಬನದಿ
ಆಡುವೆ ಅತಿ ಸ್ವಚ್ಛಂದ !

೩

ಮನೆಯಲ್ಲಿರಲೀ, ಹೊರಗೆಲ್ಲಿರಲಿ
ಮರೆಯುವನದೇ ಮನೆ ಮಾತು ?
ಯಾರದೊ ಮೋಹದ ಬಲೆಯಲಿ ಸಿಲುಕಿ
ನರಳುವುದೇತಕೆ ಸೋತು ?

೪

ಕನ್ನಡ ಮಾತಿನ ಬಳ್ಳಿಯು ಕುಡಿಯೆ
ಹಾಡಿನ ಹೂಗಳ ಸುರಿಸಿ
ಸುಗಂಧದೂಟವ ನೀಡುತಲಿಹುದು
ಆನಂದದ ಹೊಳೆ ಹರಿಸಿ !

೫

ಕನ್ನಡ ನುಡಿಯಲ್ಲಿರುವೀ ಸವಿಯು
ಮೂಲವಿ ನಮ್ಮದೆ ಸೊತ್ತು !
ಈ ಸವಿಯೆಃನಿತ್ತಿದೆಯೆಂಬುದು ಮಾತ್ರ
ಹೆರವರಿಗೇನಿದೆ ಗೊತ್ತು ?

ಶಾವಿಗೆ-ಸಕ್ಕರೆ ಕೂಡಿಸಿದಂತೆ
ಕನ್ನಡ ಮಾತಿದೆ ನೋಡು !
ಕೇಸರಿ-ಹಾಲನು ಕುಡಿ ಕುಡಿದಂ
ಕನ್ನಡದೀ ತಿಳಿ ಹಾಡು !!



ಶ್ರೀಕಾಂತ ಶಮನೇವಾಡಿ



ಪರಿವಿಡಿ:

ಎಂಟು ಗಂಟೆಗೆ

೧

ಎಂಟು ಆಯಿತು, ಗಂಟೆ ಹೊಡೆಯಿತು
ಶಾಲೆಯಲ್ಲಿ ಡಣ್ ಢಣಣಣ.
ಸೀಟು ಮಾಡದಿ ಪಾಠ ಕಲಿಯಲು
ಹೋಗು ಶಾಲೆಗೆ ದಿನ ದಿನ.

೨

ತಂಟೆ ಮಾಡುವುದುಂಟೆ ? ಬಿಡು ಬಿಡು
ಕೂಡು ಗೆಳೆಯರ ಗುಂಪನು,
ನಿಮ್ಮ ಎದೆಗಳ ಒಲವು ಬೆಳೆಯಲಿ
ಮೀರಿ ಚಂದ್ರನ ತಂಪನು !

೩

ಮನಸು ಹಸನಾಗಿರಿಸಿ ಮಾಡಿರಿ
ದಿನವು ದೇವರ ಭಕ್ತಿಯ;
ನಿತ್ಯ ಅವ ನಿಮಗೀಯಲೆಂದೇ
ಬುದ್ಧಿ-ಬಲ ಮೇಣ್ ಯುಕ್ತಿಯ.

೪

ಹಾಡಿ ನಲಿಯಿರಿ, ಕೂಡಿ ಕಲಿಯಿರಿ
ಆಟದೊಡನೆಯು ಪಾಠವ.
ಸತ್ಯ-ಪ್ರೀತಿಯು ಕಲಿತು ಬೆಳಗಿರಿ
ನಿಮ್ಮ ಹೃದಯದ ಪೀಠವ !

೫

ರಾಟೆ ತಿರುವಿರಿ ನೂಲು ತೆಗೆಯಿರಿ
ಕೋಟಿ ಜನತೆಗೆ ಖಾದಿಯು
ತೊಡಲು ಹೇಳಿರಿ; ತಿಳಿಸಲೇಳಿರಿ
ಸ್ವರ್ಗ-ಸುಖದಾ ಹಾದಿಯು!

೬

ಜಾತಿ-ಮತಗಳ ಭೂತ ಬಿಡಿಸಲು
ಬನ್ನಿರೈ ಒಂದಾಗುತ,
ಸ್ವಾರ್ಥ-ಸ್ವೈರಾಚಾರ ಹೂಳಲು
ಏಳಿರೈ ಮುಂದಾಗುತ.

ನಾ ಒಕ್ಕಲಿಗನಾದರೆ !

೧

ಒಕ್ಕಲಿಗನು ನಾನಾದರೆ ಮೊದಲು
ಎತ್ತುಗಳೆರಡನು ಕಟ್ಟುವೆನು.
ಬೆಳಗಿನ ಹೊತ್ತಿಗೆ ಕೊಟ್ಟಿಗೆ ಹೊಡೆದು
ಕಸವನು ತಿಪ್ಪೆಗೆ ಇಕ್ಕುವೆನು—

೨

ಪತ್ತಿಯು ಕಾಳನು, ಹಿಂಡಿಯು ತುಂಬಿ
ಇಡುವೆನು ಎದುರಿಗೆ ಬುಟ್ಟಿಯನು;
ತಿನ್ನುವೆ ನಾನೂ ಮೊಸರಿನ ಕೂಡ
ಉಪ್ಪಿನಕಾಯೀ, ರೊಟ್ಟಿಯನು.

೩

ರೆಂಟೆಯು ಕುಂಟೆಯು ಹೇರಿದ ಗಾಡಿಗೆ
ಎತ್ತಿನ ಜೋಡಿಯು ನಾ ಹೂಡಿ,
ಸೂರ್ಯನು ಮೂಡುವ ಹೊತ್ತಿಗೆ ಹೊಲದಲಿ
ಗಳೆಯನು ಹೊಡೆವೆನು ನಾ ಹಾಡಿ.

೪

ಬೇಸಿಗೆ ಮುಗಿದು ಮಳೆಗಾಲ್ ಬರಲು
ತರತರ ಬೀಜವ ನಾ ಬಿತ್ತಿ
ಹೊತ್ತ್ದು ಮುಳುಗುವ ಹೊತ್ತಿಗೆ ಬರುವೆನು
ಹೊಲವನು ಎಲ್ಲಾ ಕಡೆ ಸುತ್ತಿ !

೫

ಹೊಡೆಯನು ತೆರೆಯಿತು ಜೋಳದ ಹೊಲವು
ಚೆಲುವಿನ ಚಳಿಗಾಲವು ಬಂತು;
ಅಕ್ಕರೆಯಲಿ ನಾ ಹಕ್ಕಿಯ ಕಾಯುವೆ
ಹಾ-ಹೂ ಎನ್ನುತಲೇ ನಿಂತು.

೬

ಸುಗ್ಗಿಯು ಆಗಲು ಗಾಡಿಯ ಹೂಡುತ
ತರುವೆನು ಜೋಳದ ಚೀಲಗಳ,
ಇಡುವೆನು ಮನೆಯಲಿ ಜೋಡಿಸಿ ಅವುಗಳ
ಸಾಲಿನ ಮೇಲೆಯೆ ಸಾಲುಗಳ !

ಹೂವಿನ ಗಿಡಗಳ ಹಚ್ಚುವೆನು

೧

ಹಚ್ಚುವೆನಮ್ಮಾ ಹಿತ್ತಿಲದಲ್ಲಿ
ಹೂವಿನ ಗಿಡಗಳನು
ಮಾಡುವೆನಮ್ಮಾ ಮಣ್ಣನು ಹಾಕಿ
ಸಣ್ಣನೆ ಮಡಿಗಳನು.

೨

ಮಡಿಯಲಿ ನೀರನು ಹಾಕಲು ನೀ ಕೊಡು
ಬಿಂದಿಗೆಯನು ಒಂದು,
ಕೊಟ್ಟರೆ ನಾನೇ ತಪ್ಪದೆ ಹಾಕುವೆ
ನೀರ ತುಂಬಿ ತಂದು.

೩

ಆಗಲೆ ಒಡೆದವು ಗುಲಾಬಿ ಗಂಟಿಗೆ
ಚಿಗುರೆಲೆಗಳು ಚಂದ !
ಮಗ-ಮಗಿಸುವದು ಮಲ್ಲಿಗೆ ಬಳ್ಳಿ
ತುಂಬ ಹೂವಿನಿಂದ !

೪

ಹಿತ್ತಿಲ ತುಂಬ ಹೂಗಳು ಚೆಂದ
ಅಲ್ಲವೇನು ಅಮ್ಮಾ ?
ಮನೆಯಲಿ ಮಕ್ಕಳು ಇದ್ದರೆ ಚೆಂದ
ನಾನು-ತಂಗಿ-ತಮ್ಮಾ !

೫

ಅಂತೆಯೆ ನಮ್ಮನೆ ಹಿತ್ತಿಲ ಮಕ್ಕಳು
ಹೂಗಳಲ್ಲವೇನು ?
ಹೂವೂ ನಾವೂ ಈ ಮನೆಯೊಳಗಿನ
ಅಣ್ಣ-ತಮ್ಮರೇನು ?

೬

ದಿನ ದಿನ ನಾವು ನಗುತಿರುವಂತೆ
ಹೂಗಳು ಅರಳುವವು.
ಅರಳಿದ ಆ ಹೊಸ ಹೂಗಳ ಹಾಗೆಯೆ
ನಾವೂ ನಗುತಿಹೆವು !

ಹೊಳೆಯ ದಂಡೆಯಲ್ಲಿ

೧

ಗಿಡ-ಮರ-ಗುಂಪಿನ
ನೆರಳಿನ ತಂಪಿನ
ನಡುವಿಹ ಹೊಳೆಯನು ನೋಡಲ್ಲಿ
ಅದೊ ನೋಡಾಚೆಯ
ಹಸುರಿನ ಚೊಗಚೆಯ
ಗಿಡಗಳು ನಗುತಿವೆ ದಡದಲ್ಲಿ !

೨

ಮಿದು ನೆಲಗೊಂಗಡಿ-
ಯಲ್ಲಿ ಕಲಂಗಡಿ
ಬಳ್ಳಿಯು ಮೈಯನು ಚೆಲ್ಲಿಹುದು;
ಕದಿಯುವ ಕಳ್ಳನ
ಕಾಯುಲು ಮುಳ್ಳಿನ
ಬದನೆಯ ಬೇಲಿಯು ಅಲ್ಲಿಹುದು.

೩

ಈ ಎಳೆ ಹುಲ್ಲಿನ
ಮಿದು ಮುಕಮಲ್ಲಿನ
ಮೇಲಿಡು ಮೆಲ್ಲಗೆ ಹೆಜ್ಜೆಯನು;
ನಡೆ, ನೋಡಲ್ಲಿ
ಅವರೆಯ ಬಳ್ಳಿ
ಬಾರಿಸುತಿವೆ ಕಾಯ್‌ಗೆಜ್ಜೆಯನು !

೪

ಗೊಂಜೋಳದ ತೆನೆ
ಆಗಿದೆ ಸೀತೆನೆ-
ಸುಲಿಸುಲಿತನ್ನುತ್ತ ತಿನ್ನೋಣ;
ಸವತೆಯು ಕಾಯಿಗೆ
ಸೋಕಿಹ ಬಾಯಿಗೆ
ನೀರೊಡೆಯಿತು ನಾವ್ ಕೂಡೋಣ

೫

ಸಂಜೆಯ ಹೊತ್ತು
ಸುರಿಸುತ ಬಂತು
ಭೂಮಿಗೆ ಬಿಸಿಲಿನ ಬಂಗಾರ!
ಮುಗಿಲಿನ ಮೇಲೆ
ನೋಡದ ಮಾಲೆ
ಬೀರಿವೆ ಸೊಬಗಿನ ಸಿಂಗಾರ!

೬

ಈ ತೆರ ಸೊಗಸು
ನೋಡಲು ಮನಸು
ಹಕ್ಕಿಯ ತೆರ ಮೇಲೇರುವದು;
ಹೊಳೆಯುವ ಚಿಕ್ಕಿ
ಚೆಲ್ಲಿದ ಅಕ್ಕಿ
ಮುಕ್ಕಲು ಮುಗಿಲನು ಸೇರುವದು!

ನವಿಲಿಗೆ

೧

ನವಿಲೇ ನವಿಲೇ ನಿನ್ನ ಗರಿ
ಬಣ್ಣದ ಕಂಗಳ ತೆರಿಯೆ ತೆರಿ;
ಬಂದಿಹೆವೆಲ್ಲರು ನೋಡಲಿಕೆ
ನಿನ್ನೊಡನೆಯೆ ಕುಣಿದಾಡಲಿಕೆ !

೨

ನೋಡದೊ ಮುಗಿಲಲಿ ಮೋಡನ್ನು
ಮಳೆ ಬರುವದು ತೆಗೆ ಕೊಡೆಯನ್ನು !
ತೆಗೆಯದೆ ನಿಂತರೆ ತೋಯುತ್ತೀ,
ತೋಯಿಸಿಕೊಂಡರೆ ನೋಯುತ್ತೀ ?

೩

ಮುಗಿಲಲಿ ಸಿಡಿಲದೊ ಗುಡುಗುತಿದೆ,
ನೋಡಿದೊ ನೆಲವಿದು ನಡಗುತಿದೆ !
ಮಿಂಚದು ಮುಗಿಲಿನ ಅಂಚಿನಲಿ
ನಿನ್ನನು ನೋಡುವ ಹೊಂಚಿನಲಿ—

೪

ಇಣಕುತ ಮಿಣಕುತ ಹಣಕುತಿದೆ
ನಿನ್ನನು ಕುಣಿಸಲು ಕೆಣಕುತಿದೆ.
ನಿನಗಾಗಿಯೆ ನಾವ್ ಹೇಳುವದು
ಮುತ್ತಿನ ಬಿಳಿಮಳೆ ಬೀಳುವದು—

೫

ಅದಕಾಗಿಯೆ ಗರಿಕೊಡೆಯು ತೆರಿ
ನೀಲಿಯು ಹಸುರಿನ ಮುದ್ದು ಮರಿ !
ಝೂಂ, ಝುಂ ಹಾಗೆಯೆ ತೆರೆಯುತಿರು
ತೆರೆ ತೆರೆದಂತೆಯೆ ಕುಣಿಯುತಿರು.

೬

ಕುಣಿದರೆ ನಿನಗೂ ಆನಂದ,
ಕಾಣುವೆ ನಮಗೂ ಬಲು ಚಂದ !
ಅದಕೇ ನವಿಲೇ ನಿನ್ನ ಗರಿ
ಬಣ್ಣದ ಕಂಗಳ ತೆರಿಯೆ ತೆರಿ !

* ಕುರುಬರ ಹುಡುಗ *

ಕುರಿಗಳ ಕಾಯುತ ಕುರುಬರ ಹುಡುಗ
ಅಡವಿಗೆ ಬಂದಿದ್ದ—

ತಂಗಳ ರೊಟ್ಟಿ ಅಂಬಲಿ ಕುಡಿದು
ಕೈಯಲಿ ಬಿದಿರಿನ ಬಡಿಗೆಯ ಹಿಡಿದು
ಕಾಡಿನ ಹಾದಿಯ ತುಳಿಯುತ ನಡೆದು
ಒಬ್ಬನೆ ಬಂದಿದ್ದ.

ಕರಿ–ಬಿಳಿ ಕಂಬಳಿ ಹೆಗಲಲಿ ಹೊತ್ತು,
ಬಗಲಲಿ ಜಾಳಿಗೆ ಚೀಲೊಂದಿತ್ತು
ಹರಕು ರುಮಾಲು ತಲೆ ಮೇಲಿತ್ತು—
ಹಳೆಯದೆ ಆಗಿತ್ತು.

ಎಂದೋ ಹೊಲಿಸಿದ ಅಂಗಿಯ ತೊಟ್ಟು,
ಆದರು ಕಾಲಲಿ ಗೊಂಡೆಯ ಮೆಟ್ಟು
ಬೆಳ್ಳಿಯ ಬಳೆಯನು ಬಲಗೈಗಿಟ್ಟು
ಮೆಲ್ಲಗೆ ನಡೆದಿದ್ದ.

ಗುಡ್ಡದ ಓರೆಯ ಹಳ್ಳದ ತೀರದಿ
ಹಸುರಿನ ಹುಲ್ಲಿದೆ, ಹರಿಯುವ ನೀರು
ತಿಳಿಯಾಗಿರುವದು; ಬಳಿಯೊಳು ಊರು
ಯಾವುದೂ ಇಲ್ಲ!

ಕೂಲಿಯ ಜನರು ಕೆಲಸಕ್ಕೆಂದು
ದಿನ ಬರುವಂತೆಯೆ ಬಂದಿಹರಂದು.
ಅವರನು ಕಂಡು ಕುರುಬನು ಒಂದು
ಯೋಚನೆ ಮಾಡಿದನು:

ತಿರುತಿರುಗಾಗಿದೆ ನನಗಾಯಾಸ,
ಅದನನು ಕಳೆದರೆ ಹೊಸ ಆವೇಶ
ಬರುವುದು-ಮಾಡುವೆ ನೋಜಿನ ಮೋಸ
ಕರೆಯುತ ಜನರನ್ನು—

'ನೋಜಿಗಾಗಿ ತಾ ಭಯದಲಿ ಕೂಗಿ
ತೋಳವು ಬಂತೋ ತೋಳೆನಲಾಗಿ
ಬರುವರು ತೋಳನು ಹೊಡೆಯಲಿಕಾಗಿ
ನೆರೆಯಲಿ ಇದ್ದವರು.'

ಕೂಗಿದ ಕುರುಬರ ಹುಡುಗನು ಕಡೆಗೆ
'ತೋಳು ಬಂತೊ ತೋಳೆ' ನ್ನುವ ನುಡಿಗೆ
ಓಡುತ ಬಂದರು ಕೈಯಲಿ ಬಡಿಗೆ
ಹಿಡಿಯುತಲೆ ಜನರು!

'ಎಲ್ಲಿದೆ ಎಲ್ಲಿದೆ ತೋಳಿನ ಸದ್ದು?'
ಎನ್ನುತ ಸುತ್ತಲು ಹುಡುಕುತಲಿದ್ದ
ಜನರನು ನೋಡಿ ನಗುನಗುತಿದ್ದ
ಕುರುಬರ ಆ ಹುಡುಗ!

ಬಂದವರೆಲ್ಲರು ಹಿಂದಕೆ ಹೊರಳಿ
ಕುರುಬನ ಕಡೆಗೇ ನೋಡುತ ಕೆರಳಿ
ಹೋದರು ಎಲ್ಲರು ಕೂಡಲೆ ಮರಳಿ
ಬಂದ ಹಾದಿ ಹಿಡಿದು !

§ ‡ §

ಕುರುಬರ ಹುಡುಗನು ಒಬ್ಬನೆ ನಿಂತು
ನೋಡುವಾಗ ನಿಜ ತೋಳವೆ ಬಂತು !!
ಆದರೆ ಒಬ್ಬನೆ ಮಾಡುವದೆಂತು ?—
ಎನ್ನುತ ಕೂಗಿದನು:

‘ ಅಯ್ಯೋ ! ಬಂದಿತು ನಿಜ ತೋಳೀಗ !
ಹೊಡೆದೋಡಿಸಲಿಕೆ ಬನ್ನಿರಿ ಬೇಗ ! ’
ಕೇರಿ ಕೇರಿಯೂ ಕರೆದರೆ ಹುಡುಗ
ಯಾರೂ ಬರಲಿಲ್ಲ !

ಬಂದಾ ತೋಳವು ಕುರಿಯನ್ನೊಂದು
ಒಯ್ಯಲು ತೊಡಗಿತು ತಿನ್ನಲಿಕೆಂದು !
ಮೋಜಿನ ಮೋಸದ ಫಲವಿದು ಎಂದು
ಅಳಲಿಕೆ ಹತ್ತಿದನು.

ಕುರಿಗಳ ಕಾಯುವ ಕುರುಬರ ಹುಡುಗನು
ಅಳಲಿಕೆ ಹತ್ತಿದನು !

ಮಲಗು ಕಂದ

೧

ಬಣ್ಣದ ತೊಟ್ಟಿಲ, ಹೂವಿನ ಬಟ್ಟಿಲ–
ಕಣ್ಣಿನ ತಮ್ಮನ ತೂಗುವೆನು.
ಕಟ್ಟಿದ ತೊಟ್ಟಿಲ ಹಗ್ಗವ ಜಗ್ಗಿ
ಆಡುತ ಮಲಗಲು ಹಾಡುವೆನು:

೨

ಹಾಲನು ಕುಡಿಕುಡಿದಾಡುತ ಮಲಗು
ತೊಡೆಯ ಮೇಲೆ ನೀನು,
ಹರಿಯುವ ಹಳ್ಳದ ನೀರಲಿ ಹರಿಯುತ
ಆಡುವಂತೆ ಮೀನು !

೩

ಆಡಲು ಕೊಡುವೆನು ಬಣ್ಣದ ಚೆಂಡನು
ಮಲಗು ತೋಳ ಮೇಲೆ ,
ಮುತ್ತಿಡುವಂತೆಯೆ ಮಂಜಿನ ಹನಿಯು
ಕಮಲದೆಲೆಯ ಮೇಲೆ !

೪

ಗಿಲಿಕೆಯು ಕೊಡುವೆನು ಸುಮ್ಮನೆ ಮಲಗು
ನನ್ನೆದೆ ಬನದಲ್ಲಿ,
ಹೂವಿನ ಮೊಗ್ಗೆಯು ಹುದುಗಿರುವಂತೆ
ಹಸಿರಿಲೆ-ಬಳ್ಳಿಯಲಿ !

೫

ಮುದ್ದಿನ ಕಂದಾ ಮಲಗು ಮುಕುಂದಾ
ನನ್ನ ಹೆಗಲ ಮೇಲೆ,
ಚೆಲುವಿನ ಚಂದ್ರನು ನಲಿ ನಲಿವಂತೆ
ನೀಲ ಮುಗಿಲ ಮೇಲೆ !

ಬಿಡು ಬೇಡಾದರೆ ಬೇಗ ಮಲಗು ನೀ
ತೂಗು-ತೊಟ್ಟಿಲಲ್ಲಿ;
ತಾಯ್ತನದಾಸೆಯು ಬಳ್ಳಿಗೆ ಅರಳಿದ
ಹೂವಿನ ಬುಟ್ಟಿಯಲಿ !

—:ದುರುಗಮುರಗಿ:—

ಭಕ್ತರು ಬಂದಾರಽ ಚೆಲ್ಲಾ ತಂದಾರ
ತಾನಽ ತಂದಾನ....
ಡರ್‌ಡರ್‌ಡರಕ್.

೧

ಓಣಿ ತಿರುಗಿ ದುರುಗಮುರಗಿ
ಡೋಲು ಬಡಿದ ಡರ್‌ಡರಕ್ !
ಜಡೆಯು ಬಿಚ್ಚಿ ಹಲ್ಲು ಕಚ್ಚಿ
ಹೊಡೆದುಕೊಂಡ ಲಡ್‌ಲಡಕ್ !

೨

ದೊಡ್ಡದಾದ ನಾರ ಬಾರ-
ಕೋಲು ಹಿಡಿದು ಕೈಯಲಿ
ಕುಣಿದು ಮಣಿದು ಹೊಡೆದುಕೊಂಡ
ತನ್ನ ಬರಿಯ ಮೈಯಲಿ !

೩

ನಿಂತ ಜನರು ನಡಗುವಂತೆ
ದೇವರೆದುರು ಗುಡುಗಿದ;
ದೇವ ತಾನೆ ತನ್ನ ಮೈಯು
ತುಂಬಿದಂತೆ ನಡುಗಿದ !

೪

ಕೈಗು ಮೈಗು ಹಲವು ಬಣ್ಣ
ಹಣೆಯು ತುಂಬ ಕುಂಕುಮ,
ಕೊರಳಿನಲ್ಲಿ ಹರಳ ಮಾಲೆ-
ಕರಿದು ಬಿಳಿದು ಸರಿಸಮ !

೫

ಡೋಲು ಬಡಿದು ಜೋಲಿ ಹೊಡೆದು
ಕೈಯು ಮುಗಿದ ತಾಯಿಗೆ;
ಬೇಡಿಕೊಂಡ ಬೆಲ್ಲ-ಕಾಯಿ
ಇಟ್ಟು ಅವಳ ಎದುರಿಗೆ—

........×........

ತಾಯೀ ದೇವಿ ಕಾಯೌ ನಿನಗ
ಕಾಯೀ ತಂದಾರ,
—ತಾನಃ ತಂದಾನ !
ಡರ್....ಡರ್....ಡರಕ್....


ನಿನ್ನ ಭಕ್ತರು ಬಂದಾರ-ನಿನಗ
ಬೆಲ್ಲಾ ತಂದಾರ,
—ತಾನಃ ತಂದಾನ !
ಡರ್....ಡರ್....ಡರಕ್,

ಅಮ್ಮಾ ಮಕ್ಕಳು ಬಂದಾರ–ನಿನಗ
    ಅಕ್ಕೀ ತಂದಾರ.
        —ತಾನಽ ತಂದಾನ !
            ಡರ್....ಡರ್....ಡರಕ್,

ತಾಯೀ, ಅಜ್ಜೀ ಬಂದಾಳ-ನಿನಗ
    ಗೆಜ್ಜೀ ತಂದಾಳ
        —ತಾನಽ ತಂದಾನ !
            ಡರ್....ಡರ್....ಡರಕ್.

ತಾನಽ ತಂದಾನ
    ತಾನಽ ತಂದಾನ
        ಡರ್....ಡರ್....ಡರಕ್
        ಡರ್....ಡರ್....ಡರಕ್.





ತಿದ್ದುಪಡಿ.

ಪುಟ	ಸಾಲು	ತಪ್ಪು	ಸರಿ
೭	೧೩	ನನ್ನ	ನನ
೮	೪	ಬಳ್ಳಿಯಲ್ಲಿ	ಬಳ್ಳಿಯಲಿ
೧೪	೧೨	ಬಾ ಒಳಗೆ ಬಾರೆ	ಬಾ ಬಾರೆ ಒಳಗೆ
೧೬	೧೭	ನನಗಗೈತೀ	ನನಗಾಗೈತಿ
೧೮	೩	ಇಡು ತೋಡುತ	ಇಡುತೋಡುತ
೩೦	೮	ಮನೆಮೋಹಕ	ಮನಮೋಹಕ
೩೫	೭	ಶಾಲೆಯಲ್ಲಿ	ಶಾಲೆಯಲಿ
೩೬	೨	ಆಟದೊಡನೆಯ	ಆಟದೊಡನೆಯೆ
೩೯	೯	ಒಡೆವವು	ಒಡೆವವು
೪೯	೪	ಹಸಿರಿಲಿ	ಹಸಿರೆಲೆ

ಪುಟ ೩೬ ರಲ್ಲಿ ' **ಎಂಟು ಗಂಟೆ** ' ಯ ಕೊನೆಯ ನುಡಿಯನ್ನು ಹೀಗೆ ಓದಿಕೊಳ್ಳಬೇಕು.

ನವ್ಯ ಭವಿತದ ಭವ್ಯ ಭಾರತ
ದಿವ್ಯ ಭವನದ ಕಂಬಗಳ್
ನೀವೆ ಅಲ್ಲವೆ ಭರತ ಮಾತೆಯ
ಕೀರ್ತಿ ಜ್ಯೋತಿಯ ಬಿಂಬಗಳ್ !

ಸ್ನೇಹ ಪ್ರಕಾಶನದ ಪ್ರಥಮ ಪುಷ್ಪ

'ಐದಳ ಮಲ್ಲಿಗೆ'ಯ ಪರಿಮಳ:—

"**ಐದಳ ಮಲ್ಲಿಗೆ**" ಪುಸ್ತಕದಲ್ಲಿ ಒಟ್ಟಾರೆ ೩೫ ಕವನಗಳಿವೆ. ಎಲ್ಲವೂ ಲೇಸಾಗಿವೆ, ಎಲ್ಲವೂ ಚೊಕ್ಕವಾಗಿವೆ, ಕೆಲವು ತಾನೆ ಸೊಗಸಾಗಿವೆ....... ಮುಗ್ಧ ಮುಗ್ಧ ಕನ್ನಿಗರಾದ ಇವರು......ಮುಡಿದಿರುವ ಗುಲಗಿ ಮನಸ್ಸು ತುಂಬಿ ಹಿಗ್ಗುತ್ತವೆ; ತಲೆ ಸಹಸಾ ತೂಗುತ್ತವೆ."

- ಮಂ. ಗೋವಿಂದ ಪೈ
(ಮುನ್ನುಡಿಯಲ್ಲಿ)

"....ಪ್ರಸ್ತುತ ಕವನ ಸಂಗ್ರಹದ ಕವಿಗಳು ಪ್ರಮುಖಪಟ್ಟು ಬೆಳೆಸಿರುವ ಈ '**ಐದಳ ಮಲ್ಲಿಗೆ**,' ಗತಿಸಿಹೋಗಿರುವ ಐವರು ಕವಿವರ್ಯರ ಅಡಿದಾವರೆಗಳಲ್ಲಿ ಅರ್ಪಿತವಾಗಿರುವುದು ತುಂಬಾ ಉಚಿತವಾಗಿದೆ.......ನೇಮಿಚಂದ್ರ ಹೇಳಿದಂತೆ 'ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗೆ ಸಲ್ಲದೆ ಬಾಡಿ ಪೋಗದೆ?' -ಅಂತೆ ಈ ಕೃತಿಯನ್ನು ಕೊಂಡು ಓದಿ ರಸಿಕರು ಪ್ರೋತ್ಸಾಹಿಸಬೇಕು."

— ಪ್ರೊ. ಕೆ. ಎಸ್. ಧರಣೇಂದ್ರಯ್ಯ.
(ಉದ್ಘಾಟನಾ ಭಾಷಣದಲ್ಲಿ)

"....ಅವರ ಮುಖಪುಟ ಅಂದವಾಗಿದೆ......ಕವನಗಳು ಮನಸನ್ನು ಹಿಡಿಯುವಂತಿವೆ.......ಐವರು ಕವಿಗಳ ಕವನಗಳು ಸೇರಿಕೊಂಡು 'ಐದಳ ಮಲ್ಲಿಗೆ'ಯಾಗಿ ಅರಳಿದುದು ನನಗೆ ತುಂಬಾ ಆನಂದವನ್ನುಂಟು ಮಾಡಿದೆ; ರಸಿಕರೆಲ್ಲರಿಗೂ ಆನಂದವನ್ನು ನೀಡಬಲ್ಲುದಾಗಿ ನಂಬಿದ್ದೇನೆ. ಐವರು ಕವಿಗಳು ಒಟ್ಟಿಗೆ ಸೇರಿ ಈ ರೀತಿ ಸೌಹಾರ್ದದಿಂದ ಕಾರ್ಯ ಮಾಡುತ್ತಿರುವ ಸಂಗತಿಯು ಅತ್ಯಂತ ಅಭಿನಂದನೀಯವಾದುದು."

— ಡಾ. ಡಿ. ಎಸ್. ಕರ್ಕಿ, ಹುಬ್ಬಳ್ಳಿ.

" ಐದಳ ಮಲ್ಲಿಗೆಯು........ವಾಸನೆಯನ್ನು ಸೇವಿಸಿದೆ. ಸುಲಭ ಶೈಲಿಯಲ್ಲಿ ಸಾತ್ತ್ವಿಕ ವಿಚಾರಗಳನ್ನು ಬೀರುವ ತಮ್ಮ ಪ್ರಯತ್ನ ನೋಡಿ ತುಂಬ ಸಂತೋಷವಾಗುತ್ತದೆ. ಉದಯೋನ್ಮುಖ ಕವಿಗಳಾದ ತಮಗೆ ನನ್ನ ಅಭಿನಂದನೆಗಳು "

— ಡಾ. ಎ. ಎನ್. ಉಪಾಧ್ಯೆ, ಕೊಲ್ಹಾಪುರ.

" ಸ್ನೇಹ ಪ್ರಕಾಶನದವರ ಈ ಕವಿತಾ ಸಂಕಲನ, ಒಂದು ವೈಶಿಷ್ಟ್ಯಪೂರ್ಣ ಸಂಕಲನವಾಗಿದೆ........ಇದರಲ್ಲಿರುವ ಐದು ದಳಗಳ ಮಲ್ಲಿಕಾ ಪುಷ್ಪಗಳ ಪರಿಮಳವನ್ನು ಆಘ್ರಾಣಿಸಲಿಚ್ಛಿಸುವ ರಸಿಕ ಸಾಹಿತಿಗಳು ಅಗತ್ಯ ಈ ಗ್ರಂಥವನ್ನು ಸಂಗ್ರಹಿಸಿ ಆನಂದಗೊಳ್ಳಬೇಕು. ಮುಖ ಚಿತ್ರವೂ, ಮುದ್ರಣ, ಪುಸ್ತಕ ತಯಾರಿಕೆ ಮುಂತಾದವೂ ಆಕರ್ಷಕವಾಗಿವೆ."

— ' ಸುಬೋಧ, ' ಬೆಂಗಳೂರು.

" ... ಈ ಕವನ ಸಂಗ್ರಹವು ಹಲವು ಉತ್ತಮ ಕವನಗಳಿಂದ ಕೂಡಿದ್ದುಕೊಂಡು ಆಶಾದಾಯಕವಾಗಿದೆ. ಈ ವಿಧದ ಸಾಹಸಕ್ಕೆ ಏಕಮುಖವಾಗಿ ನಿಂತಿರುವ ಈ ಐವರು ಕವಿಗಳನ್ನು ನಾವು ಅಭಿನಂದಿಸುತ್ತೇವೆ; ಇದನ್ನು ನಾಡವರು ಆದರದಿಂದ ಬರಮಾಡಿಕೊಳ್ಳಲೆಂದೂ ಹಾರೈಸುತ್ತೇವೆ. "

— ' ಯುಗಪುರುಷ, ' ಕಿನ್ನಿಗೋಳಿ.

" ಐವರಿಂದ ಇದು ಸಂಕಲಿತವಾದುದರಿಂದ ಇದರಲ್ಲಿ ವಿವಿಧತೆ ಇದೆ. ವಿವಿಧತೆಯಲ್ಲೂ, ಇಡೀ ಸಂಕಲನ ಸಾಮರಸ್ಯವಾಗಿ ಒಂದು ಕಾವ್ಯಸೂತ್ರ ಹೆಣೆದುಕೊಂಡಿದೆ........ಮರಾಠಿ ಪ್ರಭಾವದ ಮೋಡ ಜೋಂಡು ಮುಸುಕಿದ ಕನ್ನಡದ ಕೊಳ ಶಮನೇವಾಡಿ ಪ್ರದೇಶ. ಅಂಥಲ್ಲಿ ಕನ್ನಡ ಪ್ರಕಾಶನ ಸಂಸ್ಥೆಯೊಂದನ್ನು ಸ್ಥಾಪಿಸಿ ಕನ್ನಡ ಜಾಗೃತಿಯನ್ನು ಕೈಕೊಂಡ ಈ ಯುವಕ ಸ್ನೇಹ-ಜೀವಿಗಳ ಕಾರ್ಯ ತುಂಬ ಧೈರ್ಯದ್ದು ಮತ್ತು ಎಲ್ಲರೂ ಪ್ರೋತ್ಸಾಹಿಸಬೇಕಾದಂಥದ್ದು. "

— ' ರೈತ, ' ಬಳ್ಳಾರಿ.



ಮುಂಬರುವ ಕೃತಿಗಳು:

ಶ್ರೀ [illegible] ಕವನ ಸಂಗ್ರಹ—

'ಸೀತೆನೆ ಸುಲಿಗಾಯಿ'

ಶ್ರೀ [illegible] .. 'ರಸಿಕಪಕ್ಷಿ'

ಶ್ರೀ ಶ್ರೀಕಾಂತ [illegible] ರಸಗವಿತೆಗಳು 'ಚೈತನ್ಯ ಚೈತ್ರ'

ಶ್ರೀ. [illegible] ರಿಂದ

'ಸುಮಾಂಗಲಿ' (ಕವನಸಂಗ್ರಹ) ● 'ವನಮಾರಮಲ್ಲಿಗೆ' (ಕವನಸಂಗ್ರಹ)

ಶ್ರೀ [illegible] ರಿಂದ

'ಆಶಾಕಿರಣ' (ಕವನಸಂಗ್ರಹ). ● 'ಸೂರಜಮಾಸ' (ಖಂಡಕಾವ್ಯ)

'[illegible] ಬಿಗಳು' (ಸಂಪಾದಿತ)

[illegible]

ದಿ. '[illegible]' ರ ತ್ರಿಭಾಷಾ ಕಾವ್ಯಸಂಕಲನ

'ಹೃದಯ ನಿರ್ಝರ'

-೧೦೦೩-

ಸ್ನೇಹ ಪ್ರಕಾಶನ. [illegible] (ಜಿ. ಬೆಳಗಾವಿ)

ಕಮಲ ಮುದ್ರಣ [illegible] ಪ್ರೆಸ್, ಬೆಳಗಾವಿ.

ಮುಂಬರುವ ಕೃತಿಗಳು:

ಶ್ರೀ [illegible] ಕವನ ಸಂಗ್ರಹ—
'ಸೀತೆನೆ ಸುಲಿಗಾಯಿ'

ಶ್ರೀ [illegible] ,, 'ರಸಿಕಪಕ್ಷಿ'

ಶ್ರೀ ಶ್ರೀಕಾಂತ [illegible] ರಸಗವಿತೆಗಳು—'ಚೈತನ್ಯ ಚೈತ್ರ'

ಶ್ರೀ. [illegible] ಅವರಿಂದ

'ಸುಮಂಗಲಿ' (ಕವನಸಂಗ್ರಹ) ● 'ಮಾಮರದಾಶ್ಲಿಗೆ' (ಕವನಸಂಗ್ರಹ)

ಶ್ರೀ [illegible] ಅವರಿಂದ

'ಆಶಾಕಿರಣ' (ಕವನಸಂಗ್ರಹ) ● 'ಸೂರಜಪಾಸ' (ಖಂಡಕಾವ್ಯ)

'[illegible] ಗಳು' (ಕಾದಂಬರಿ)

[illegible]

ಬಿ. [illegible] ಶ್ರೀ [illegible] ಸಂಕಲನ

'ಹೃದಯ ನಿರ್ಝರ'

—:೦೦:—

ಸ್ನೇಹ ಪ್ರಕಾಶನ, [illegible] ([illegible])

[illegible] ಪ್ರೆಸ್, [illegible]